ಅಸಲು ದಾವೆ ಸಂಖ್ಯೆ - 118/2010
ಡಿಡಬ್ಲ್ಯೂ - 01
ದಿನಾಂಕಃ 21-09-2024
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ.ಎಂ.ಎಸ್.ಬಿ ವಕೀಲರಿಂದ**

ನಿಮ್ಮ ಪ್ರತಿವಾದ ಪತ್ರದ ಪ್ಯಾರಾ ನಂಬರ 11 ರಲ್ಲಿ ನೀವು 1 ನೇ ಪ್ರತಿವಾದಿಯ ಕುಟುಂಬದ ವಂಶಾವಳಿಯನ್ನು ಬರೆಸಿರುತ್ತೀರಿ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು

ವಾದಿಯರು ಬಿರಾದರ ಕುಟುಂಬಕ್ಕೆ ಸಂಬಂದಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರ ಅಡ್ಡ ಹೆಸರು ಬಿರಾದರ ಇರುತ್ತದೆ ಬಿರಾದರ ನವಾಬ ಇರುತ್ತದೆ ಮುಂದುವರೆದು ಬಿರಾದರ ಮಾತ್ರ ಇರುತ್ತದೆ. ನೀವು ವಾದಿಯರ ಮನೆತನಕ್ಕೆ ಸೇರಿದವರು ಎಂದರೆ ಸರಿಯಲ್ಲ. ನಿಮ್ಮ ಮುತ್ತಜ್ಜನ ಹೆಸರು ಏನು ಎಂದರೆ ನನಗೆ ಹೇಳಲು ಆಗುವುದಿಲ್ಲ. ನಿಮ್ಮ ಅಡ್ಡ ಹೆಸರು ಸಹ ಬಿರಾದರ ನವಾಬ ಇದೆ ಎಂದರೆ ಸರಿ. ನಿಮ್ಮ ಮುತ್ತಜ್ಜನಿಗೆ ಒಟ್ಟು ಎಷ್ಟು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಮುತ್ತಜ್ಜನವರು ಯಾವ ಕುಟುಂಬದಿಂದ ಬಂದರು ಎಂದು ಹೇಳಲು ಆಗುತ್ತದೆಯಾ ಎಂದರೆ ಮಯ್ಯಾನ ಕುಟುಂಬದವರಿಂದ ಬಂದಿರುತ್ತಾರೆ.

ವಾದಿಯರು ತಮ್ಮ ವಾದ ಪತ್ರದಲ್ಲಿ ನಿಮ್ಮ ಮುತ್ತಜ್ಜನ ಬಗ್ಗೆ ಮಾಹಿತಿ ನೀಡಿರುತ್ತಾರೆ ಸದರಿ ಮಾಹಿತಿಯನ್ನು ಪಡೆಯಲು ನೀವೇನಾದರೂ ಪ್ರಯತ್ನಪಟ್ಟಿರುತ್ತೀರಾ ಎಂದರೆ ಪ್ರಯತ್ನಪಟ್ಟಿರುವುದಿಲ್ಲ. ಸರ್ದಾರ ಮಹೆಬೂಬ ಅಲಿಖಾನ್ ರವರ ಮುತ್ತಜ್ಜನ ಹೆಸರು ನಿಮ್ಮ ವಂಶಾವಳಿಯಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿ. ಸರ್ದಾರ ಮಹೆಬೂಬ ಅಲಿಖಾನ್ ರವರ ತಂದೆಯ ಹೆಸರು ಮಹಮ್ಮದ ಅಕ್ಬರಖಾನ್ ಎಂದರೆ ಸರಿ. ಸದರಿ ಮಹಮ್ಮದ ಅಕ್ಬರಖಾನ್ ರವರ ತಂದೆಯ ಹೆಸರು ಮುಬಾರಿಸಖಾನ್ ಎಂದರೆ ನನಗೆ ಗೊತ್ತಿಲ್ಲ. ಮುಬಾರಿಸಖಾನ್ ರವರ ತಂದೆಯ ಹೆಸರು ಅಬ್ದುಲಖೈರ ಖಾನ್ ಎಂದರೆ ನನಗೆ ಗೊತ್ತಿಲ್ಲ. ಅಬ್ದುಲಖೈರ ಖಾನ್ ರವರ ಹೆಂಡತಿಯ ಹೆಸರು ರಾಜಾಬಿ ಎಂದರೆ ನನಗೆ ಗೊತ್ತಿಲ್ಲ.

ಈ ಬಿರಾದರ ಕುಟುಬಂದ ಮೂಲ ಪುರುಷ ಅಬ್ದುಲಖೈರ ಖಾನ್ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಬ್ದುಲ ಖೈನ ಖಾನ್ ರವರಿಗೆ ಇಬ್ಬರು ಮಕ್ಕಳು ಇರುತ್ತಾರೆ, ಒಬ್ಬರ ಹೆಸರು ದುಲಾಖಾನ್ ಮತ್ತು ಮುಬಾರಿಸ ಖಾನ್ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದುಲಾಖಾನ್ ರವರಿಗೆ ಫಿರೋಜ ಖಾನ್ ಎಂಬ ಮಗ ಇದ್ದನು ಎಂದರೆ ನನಗೆ ಗೊತ್ತಿಲ್ಲ. ಫಿರೋಜ ಖಾನ್ ರವವರಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದು ಅವರ ಹೆಸರು ಅಹ್ಮದ್ ಬಿಬಿ ಮತ್ತು ಹುಸೇನಬಾನು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಹುಸೇನಬಾನುರವರಿಗೆ ಮಹಮ್ಮದ ಬೇಗಂ ಮತ್ತು ರಹೆಮತಬಿ ಎಂಬ ಇಬ್ಬರು ಮಕ್ಕಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಮಹಮ್ಮದ ಬೇಗಂ ರವರ ಗಂಡ ಮಜೀದ್ ಖಾನ್ ಇದ್ದನು ಎಂದರೆ ನನಗೆ ಗೊತ್ತಿಲ್ಲ. ಸದರಿ ಮಜೀದ ಖಾನ್ ರವರಿಗೆ ಹಕೀಮಖಾನ್, ಜೋಹರಾ ಬೇಗಂ, ಫಿರೋಜ ಖಾನ್ ಇರುತ್ತಾರೆ ಎಂದರೆ ಸರಿ.

ನಿಮ್ಮ ಅಜ್ಜನ ಹೆಸರು ಏನು ಎಂದರೆ ಮಜೀದ ಖಾನ್ ಇರುತ್ತದೆ. ಫಿರೋಜ ಖಾನ್ ರವರಿಗೆ ಎಷ್ಟು ಜನ ಮಕ್ಕಳು ಎಂದರೆ ಆರು ಜನ ಮಕ್ಕಳು ಇರುತ್ತಾರೆ, ಅವರ ಹೆಸರುಗಳು 1) ಮುಸ್ತಫಾ ಖಾನ್, 2) ಜಿಲೇರ ಖಾನ್ 3) ಅಮಾನುಲ್ಲಾ ಖಾನ್ 4) ಮುಸ್ತಾಕ್ ಅಹ್ಮದ (ನಾನು) 5) ಸಾಬೀರಾ ಬೇಗಂ ಮತ್ತು 6) ಫರೀದಾ ಬೇಗಂ. ಫಿರೋಜ ಖಾನ್ ರವರ ಗಂಡ ಮತ್ತು ಮಕ್ಕಳ ಮಾಹಿತಿ ನನಗೆ ಗೊತ್ತಿರುವುದಿಲ್ಲ. ಹಕೀಬ್ ಖಾನ್ ರವರ ಹೆಂಡತಿ ಮತ್ತು ಮಕ್ಕಳ ಮಾಹಿತಿ ನನಗೆ ಗೊತ್ತಿರುವುದಿಲ್ಲ. ಹಕೀಬ್ ಖಾನ್ ನಿಮ್ಮ ದೊಡ್ಡಪ್ಪ ಎಂದರೆ ಸರಿ. ಹಕೀಬ ಖಾನ್ ರವರ ಮಕ್ಕಳನ್ನು ಈ ದಾವೆಯನ್ನು ಪಕ್ಷಗಾರರನ್ನಾಗಿ ಮಾಡಿದ್ದಾರೋ ಇಲ್ಲವೋ ಎಂದರೆ ಮಾಡಿರುತ್ತಾರೆ. ಜೊಹರಾ ಬೇಗಂ ನ ಮಕ್ಕಳು ಮಲಿಕಾ ಬೇಗಂ, ಫಯಾಜ ಖಾನ್ ಎಂದರೆ ಸರಿ. ಮುಸ್ತಫಾ ಖಾನ್ ಮತ್ತು ರಶೀದ್ ಖಾನ್ ಮರಣ ಹೊಂದಿರುತ್ತಾರೆ ಎಂದರೆ ಸರಿ.

ನಿಮ್ಮ ಅಜ್ಜನಾದ ಮಜೀದ ಖಾನ್ ರವರಿಗೆ ರಹೆಮತಬಿ ಎಂಬ ಸಹೋದರಿ ಇದ್ದರು ಎಂದರೆ ಸುಳ್ಳು. ಮಜಿದ ಖಾನ್ ರವರ ವಂಶಾವಳಿಯ ಬಗ್ಗೆ ನಿಮ್ಮ ಪ್ರತಿವಾದ ಪತ್ರದಲ್ಲಿ ಮತ್ತು ವಂಶಾವಳಿಯಲ್ಲಿ ಉಲ್ಲೇಖ ಮಾಡಿದ್ದೀರಾ ಎಂದರೆ ಮಾಡಿರುವುದಿಲ್ಲ. ರಹೆಮತಬಿ ರವರ ಮಕ್ಕಳು ರೌಫ್ ಖಾನ್, ಅಹ್ಮದ್ ಖಾನ ಮತ್ತು ಬಾನು ಬೇಗಂ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ರೌಫ್ ಖಾನ್ ರವರ ಮಕ್ಕಳಾದ ಫಯಾಜ್ ಖಾನ್ ಮತ್ತು ಜಕೀಯಾ ಬೇಗಂ ರವರು ಮರಣ ಹೊಂದಿರುತ್ತಾರೆ ಎಂದರೆ ಸರಿ. ರೌಫ್ ಖಾನ್ ರವರ ಮಕ್ಕಳ ಪೈಕಿ ಯಾರ್ಯಾರು ಜೀವಂತವಾಗಿದ್ದಾರೆ ಎಂದರೆ ಅಲ್ತಾಫ ಖಾನ್, ಅಖ್ಲಾಕ್ ಖಾನ್, ಅತೀಕ್ ಖಾನ್ ಮತ್ತು ಹಸಿಯಾ ಬೇಗಂ ರವರು ಜೀವಂತ ಇರುತ್ತಾರೆ.

ಅಹ್ಮದ್ ಖಾನ್ ರವರ ಮಕ್ಕಳ ಪೈಕಿ ಯಾರ್ಯಾರು ಜೀವಂತವಾಗಿದ್ದಾರೆ ಎಂದರೆ ಅಫ್ಜಲ್ ಖಾನ್, ಮಜೀದ್ ಖಾನ್, ತಾಹಿರಾ ಬೇಗಂ ಮತ್ತು ಜಿಯಾ ಬೇಗಂ ರವರು ಜೀವಂತ ಇರುತ್ತಾರೆ. ರಹೆಮತಬಿರವರ ಮಕ್ಕಳು ಜೀವಂತವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ರಹೆಮತಬಿರವರ ಮಕ್ಕಳಾದ ಬಾನು ಬೇಗಂ ರವರು ತೀರಿಕೊಂಡಿರುತ್ತಾರೆ. ನಿಮ್ಮ ಅಜ್ಜನಾದ ಸರ್ದಾರ ಮಜೀದ ಖಾನ್ ರವರು ಯಾವಾಗ ಮರಣ ಹೊಂದಿರುತ್ತಾರೆ ಎಂದರೆ ಸುಮಾರು 1955-56 ರಲ್ಲಿ ಮರಣ ಹೊಂದಿರುತ್ತಾರೆ. ದುಲಾಖಾನ್ ರವರಿಗೆ ಅಬ್ದುಲ ಬಿಬಿ ಎಂಬ ಮಗಳು ಇದ್ದಳು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಹ್ಮದ ಬಿಬಿ ರವರಿಗೆ ರಹಿಮಾನ್ ಖಾನ್ ಮತ್ತು ಲಾಡಲಿ ಬೇಗಂ ಎಂಬ ಮಕ್ಕಳು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಹ್ಮದ ಬಿಬಿ

ರವರ ಮೊಮ್ಮಕ್ಕಳಾದ ಅಬ್ದುಲ ರಶೀದ ಖಾನ್ ಮತ್ತು ದಿಲೇರ ಖಾನ್ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಬ್ದುಲ ರಶೀದ ಖಾನ್ ರವರಿಗೆ ಇಬ್ಬರು ಮಕ್ಕಳು ಅವರು ಅಬ್ದುಲ ಕರೀಮ್ ಖಾನ್ ಮತ್ತು ಮಹಮ್ಮದ ಖಾನ್ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ದಿಲೇರ ಖಾನ್ ಮತ್ತು ಫಜಲ ಮಹಮ್ಮದ ಖಾನ್ ರವರು ಪಕ್ಷಗಾರರಾಗಿರುತ್ತಾರೆ ಎಂದರೆ ದಿಲೇರ ಖಾನ್ ರವರು ಪಕ್ಷಗಾರರಾಗಿರುತ್ತಾರೆ, ಫಜಲಖಾನ್ ರವರು ಪಕ್ಷಗಾರರಾಗಿರುವುದಿಲ್ಲ.

ಸದರಿ ದಿಲೇರ ಖಾನ್ ರವರ ಸಂಪೂರ್ಣ ಮಾಹಿತಿ ಪಡೆದುಕೊಳ್ಳಲು ನೀವೇನಾದರು ಪ್ರಯತ್ನಪಟ್ಟಿದ್ದೀರಾ ಎಂದರೆ ಪ್ರಯತ್ನಪಟ್ಟಿರುವುದಿಲ್ಲ. ಅಬ್ದುಲ ರಹೀಮ್ ಖಾನ್ ಈ ದಾವೆಯಲ್ಲಿ ಪಕ್ಷಗಾರನಾಗಿದ್ದಾರ ಎಂದರೆ ಆಗಿರುತ್ತಾರೆ. ಅವರ ಪೂರ್ವಜರ ಸಂಪೂರ್ಣ ಮಾಹಿತಿ ಪಡೆದುಕೊಳ್ಳಲು ನೀವೇನಾದರು ಪ್ರಯತ್ನಪಟ್ಟಿದ್ದೀರಾ ಎಂದರೆ ಪ್ರಯತ್ನಪಟ್ಟಿರುವುದಿಲ್ಲ. ದಿಲೇರ ಖಾನ್ ರವರಿಗೆ ಎಷ್ಟು ಜನ ಮಕ್ಕಳು ಮತ್ತು ಅವರು ಏನಾದರು ಈ ದಾವೆಯಲ್ಲಿ ಪಕ್ಷಗಾರರಾಗಿದ್ದಾರ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಯಾರು ಮೊಮ್ಮಕ್ಕಳು ಪಕ್ಷಗಾರರಾಗಿದ್ದಾರೆ ಎಂದು ನಿಮಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ ಮುಂದುವರೆದು ಕೆಲವರ ಬಗ್ಗೆ ಮಾಹಿತಿ ಇದೆ ಕೆಲವರ ಬಗ್ಗೆ ಮಾಹಿತಿ ಇರುವುದಿಲ್ಲ.

ಲಾಡಲಿ ಬೇಗಂ ರವರಿಗೆ, ಸಲೀಮಾ ಬೇಗಂ, ತಾಹಿರಾ ಬೇಗಂ, ಅಲ್ತಾಫ್ ಮಹಮ್ಮದ ಖಾನ್ ಎಂಬ ಮಕ್ಕಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಪಕ್ಷಗಾರನಾದ ತಬರೇಜ ಖಾನ್ ಬಿನ್ ಕಾಸಿಮ್ ಖಾನ್ ಬಿರಾದರರವರ ಪೂರ್ವಜರ ಸಂಪೂರ್ಣ ಮಾಹಿತಿ ನಿಮಗೆ ಇರುವುದಿಲ್ಲ ಎಂದರೆ ಸರಿ. ಲಾಡಲಿ ಬೇಗಂ ರವರ ಮಗನಾದ ಅಲ್ತಾಫ್ ಮಹಮ್ಮದ ಖಾನ್ ರವರು ಮದುವೆಯಾಗದೆ ಮರಣ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಜೊಹರಾ ಬೇಗಂ ರವರಿಗೆ ಎಷ್ಟು ಜನ ಮಕ್ಕಳು ಎಂದರೆ ನಾಲ್ಕು ಜನ ಮಕ್ಕಳು. ಅವರ ಹೆಸರು ಮುಸ್ತಫಾ ಖಾನ್, ರಶೀದ ಖಾನ್, ಮಲಿಕಾ ಬೇಗಂ ಮತ್ತು ಫಯಾಜ್ ಖಾನ್ ಇರುತ್ತಾರೆ. ಫಿರೋಜ ಖಾನ್ ರವರಿಗೆ ಎಷ್ಟು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ರಹೆಮತಬಿರವರ ಮೊಮ್ಮಕ್ಕಳ ಹೆಸರು ಹೇಳಲು ಆಗುತ್ತದೆಯಾ ಎಂದರೆ ನನಗೆ ಗೊತಿತಲ್ಲ, ಈ ದಾವೆಯಲ್ಲಿ ರಿಯಾಜ್ ಖಾನ್, ಆಸಿಯಾ ಬೇಗಂ, ಅಲ್ತಾಫ್ ಖಾನ್, ಅಖ್ಲಾಕ್ ಖಾನ್ ಮತ್ತು ಅತೀಕಾ ಖಾನ್ ರವರು ಪಕ್ಷಗಾರರಾಗಿರುತ್ತಾರೆ ಎಂದರೆ ಸರಿ.

ಈ ದಾವೆಯಲ್ಲಿ ರಹೆಮತಬಿ ರವರ ಮೊಮಕ್ಕಳಾದ ರಜಿಯಾ ಬೇಗಂ, ತಬರೇಜ ಖಾನ್, ತಾಹಿರಾ ಬೇಗಂ, ಅಫ್ಜಲ ಖಾನ್, ಜಿಯಾ ಬೇಗಂ, ಜಾಹಿದಾ ಬೇಗಂ, ಸಲ್ಮಾ ಬೇಗಂ ಮತ್ತು

ಮಜೀದ ಖಾನ್ ರವರು ಪಕ್ಷಗಾರರಾಗಿರುತ್ತಾರೆ ಎಂದರೆ ಸರಿ ಆದರೆ ರಹೆಮತಬಿರವರು ನನಗೆ ಗೊತ್ತಿರುವುದಿಲ್ಲ. ಈ ಮೇಲೆ ಹೇಳಿದ ಹೆಸರಿನವರು ಮತ್ತು ನೀವು cousins (ಸಂಬಂಧಿಕರು) ಇರುತ್ತೀರಿ ಎಂದರೆ ಸರಿ.

ಮುಬಾರಿಸ್ ಖಾನ್ ರವರಿಗೆ ಸಾಹೇಬಖಾತು ಎಂಬ ಹೆಂಡತಿ ಇದ್ದು, ಅವರಿಗೆ ಮಹಮ್ಮದ ಅಕ್ಬರ್ ಖಾನ್ ಎಂಬ ಮಗ ಇದ್ದನು ಎಂದರೆ ಮಹಮ್ಮದ ಅಕ್ಬರ್ ಖಾನ್ ಬಗ್ಗೆ ನನಗೆ ಗೊತ್ತಿರುತ್ತದೆ ಆದರೆ ಮುಬಾರಿಸ್ ಖಾನ್ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಮಹಮ್ಮದ ಅಕ್ಬರ ಖಾನ್ ರವರ ತಂದೆಯ ಹೆಸರು ಮತ್ತು ಅಜ್ಜನ ಹೆಸರು ತಿಳಿದುಕೊಳ್ಳಲು ನೀವೇನಾದರು ಪ್ರಯತ್ನಪಟ್ಟಿದ್ದೀರಾ ಎಂದರೆ ಪ್ರಯತ್ನಪಟ್ಟಿರುವುದಿಲ್ಲ. ಮಹಮ್ಮದ ಅಕ್ಬರ ಖಾನ್ ರವರಿಗೆ ಇಬ್ಬರು ಹೆಂಡತಿಯರಿದ್ದು, ಅವರ ಹೆಸರು ದವಲತಖಾತು ಮತ್ತು ದುಲಹನಬಿ ಎಂದರೆ ಸರಿ. ದವಲತಖಾತುರವರಿಗೆ ಇಬ್ಬರು ಮಕ್ಕಳು ಇದ್ದು, ಅವರ ಹೆಸರು ಸಾಹೇಬಖಾತು ಮತ್ತು ಶಹೆಜಾದ ಖಾತು ಎಂದರೆ ಸರಿ. ಮಹಮ್ಮದ ಅಕ್ಬರ ಖಾನ್ ರವರ ಎರಡನೆ ಹೆಂಡತಿಯಾದ ದುಲಹನಬಿರವರಿಗೆ ಮುನವರಖಾತು, ನವಾಜಖಾತು ಮತ್ತು ಸರ್ದಾರ ಮಹೆಬೂಬ ಅಲಿಖಾನ್ ಎಂಬ ಮಕ್ಕಳು ಇದ್ದರು ಎಂದರೆ ಸರಿ. ಸಾಹೇಬಖಾತುರವರ ಮಗನಾದ ದಿಲಾವರ ಖಾನ್ ರವರು ಮದುವೆಯಾಗದೆ ಮರಣ ಹೊಂದಿರುತ್ತಾರೆ ಎಂದರೆ ಸರಿ. ಸಾಹೇಬಖಾತುರವರಿಗೆ ಮಯೋಜಿದ್ದೀನ್ ಖಾನ್ ಎಂಬ ಮಗ ಇದ್ದನು ಎಂದರೆ ಸರಿ. ಸದರಿ ಮಯೋಜಿದ್ದೀನ್ ಖಾನ್ ರವರ ಹೆಂಡತಿಯ ಹೆಸರು ಸಾಹೇಬಿ ಎಂದರೆ ಸರಿ. ಸದರಿ ಮಯೋಜಿದ್ದೀನ್ ಖಾನ್ ರವರ ಅಡ್ಡ ಹೆಸರು ಖಾನಜಾದೆ ಎಂದರೆ ಸರಿಯಲ್ಲ ಅವರ ಅಡ್ಡ ಹೆಸರು ಬಿರಾದರ ನವಾಬ ಇರುತ್ತದೆ. ಸದರಿ ಮಯೋಜಿದ್ದೀನ್ ಖಾನ್ ರವರು ಯಾವಾಗ ಮರಣ ಹೊಂದಿದ್ದರು ಎಂದರೆ 1962 ರಲ್ಲಿ ಮರಣ ಹೊಂದಿರುತ್ತಾರೆ. ಮಯೋಜಿದ್ದೀನ್ ಖಾನ್ ರವರ ಹೆಂಡತಿಯಾದ ಸಾಹೇಬಿರವರು ದಿಃ11-06-2007 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯು ಸಾಹೇಬಿರವರ ಮಗಳು ಎಂದರೆ ಸರಿ.

ಸರ್ದಾರ ಮಹೆಬೂಬ ಅಲಿಖಾನ್ ರವರು ಯಾವಾಗ ಮರಣ ಹೊಂದಿರುತ್ತಾರೆ ಎಂದರೆ 1940 ರಲ್ಲಿ ಮರಣ ಹೊಂದಿರುತ್ತಾರೆ. ಸದರಿ ಸರ್ದಾರ ಮಹೆಬೂಬ ಅಲಿಖಾನ್ ರವರು ತೀರಿಕೊಂಡಾಗ ಸಾಹೇಬಿ ಜೀವಂತವಾಗಿದ್ದರು ಎಂದರೆ ಸರಿ. ಅಸಲು ದಾವೆ ಸಂಖ್ಯೆ 171/1984 ದಾಖಲಾಗುವ ವೇಳೆಯಲ್ಲಿ ಸಾಹೇಬಿರವರು ಜೀವಂತವಾಗಿದ್ದರು ಎಂದರೆ ಸರಿ. ಸದರಿ ಅಸಲು ದಾವೆಯಲ್ಲಿ ಸಾಹೇಬಿರವರ ಬಗ್ಗೆ ಎಲ್ಲೂ ಉಲ್ಲೇಖ ಮಾಡಿರುವುದಿಲ್ಲ ಮತ್ತು

ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನೀವು ಹೂಡಿದ ದಾವೆಯಲ್ಲಿ, ಮೇಲ್ಮನವಿಗಳಲ್ಲಿ ಮತ್ತು ರಿಟ್ ಗಳಲ್ಲಿ ಎಲ್ಲೂ ಸಹ ಸಾಹೇಬಿರವರ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಅಸಲು ದಾವಾ ಸಂಖ್ಯೆ 249/2014 ರಲ್ಲಿ ನೀವು ಪ್ರತಿವಾದಿಯಾಗಿದ್ದು, ನಿಮ್ಮ ಪ್ರತಿವಾದ ಪತ್ರದಲ್ಲಿ ಸಾಹೇಬಿರವರ ಬಗ್ಗೆ ಎಲ್ಲೂ ಸಹ ಉಲ್ಲೇಖ ಮಾಡಿರುವುದಿಲ್ಲ ಎಂದರೆ ಸದರಿ ದಾವೆಯಲ್ಲಿ ನಾವು ಪ್ರತಿವಾದ ಪತ್ರದಲ್ಲಿ ಸಾಹೇಬಿರವರ ಬಗ್ಗೆ ನಮೂದು ಮಾಡಿರುವುದಿಲ್ಲ. ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಂಖ್ಯೆ 39/2001 ರಲ್ಲಿಯೂ ಸಹ ಸಾಹೇಬಿರವರ ಬಗ್ಗೆ ಎಲ್ಲಿಯೂ ಸಹ ಉಲ್ಲೇಖ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ನೆನಪು ಇರುವುದಿಲ್ಲ ಎಂದು ನುಡಿದಿರುತ್ತಾರೆ.

ಈ ದಾವೆಯಲ್ಲಿ ನೀವು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿಯು ಮತ್ತು ವಂಶಾವಳಿಯಲ್ಲಿಯು ಸಾಹೇಬಿರವರ ಬಗ್ಗೆ ಉಲ್ಲೇಖ ಮಾಡಿರುವುದಿಲ್ಲ ಎಂದರೆ ಸರಿ. ಸಾಹೇಬಿರವರು ಮರಣ ಹೊಂದುವ ತನಕ ನಿಮ್ಮ ಜೊತೆಯಲ್ಲಿಯೇ ಇದ್ದರು ಎಂದರೆ ಸರಿ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.